ಕಡೆಗೊಮ್ಮೆ ದೃಷ್ಟಿಸಿದ ಡಿಕ್ಯಾಸ್ಟ್ರೊ, ''ನಿಮ್ಮನ್ನು ಈ ಮೊದಲೇ ಎಲ್ಲೋ ನೋಡಿದಂತಿದೆಯಲ್ಲ...'' ಎಂದು ನೆನಪಿಸಿಕೊಳ್ಳುವವನಂತೆ ಎರಡು ಬೆರಳಿನಿಂದ ಹಣೆಗೆ ಮೆಲ್ಲನೆ ಬಡಿದುಕೊಂಡಿದ್ದ. ''ಹೇಳು ನೋಡೋಣ'' ಎಂದು ತಮಾಷೆ ಮಾಡಿದ್ದೆ ನಾನು ಅವನ ತಟ್ಟೆಗೆ ಕಡುಬು, ನೀರುದೋಸೆ ಬಡಿಸುತ್ತಾ. ಹಾಗೇ ನೋಡುತ್ತಿದ್ದ ಡಿಕ್ಯಾಸ್ಟ್ರೊ ಥಟ್ಟನೆ, ''ಅರೆ, ವ್ವಾಟ್ ಎ ಸರ್ಪ್ರೈಸ್. ಸುಮತಿ ಅಲ್ವಾ...'' ಎಂದು ತಟ್ಟೆಗೆ ಕೈ ಹಾಕಿ ನನ್ನ ಕಡೆ ನೋಡಿ, ''ಕಳ್ಳ, ಇದೇನಿದೋ ನಿಮ್ಮ ಆಟ. ಸುಮತಿ ನಕ್ಸಲ್ ಗ್ರೂಪ್ ಸೇರಿಕೊಂಡಿದ್ದಾಳೆ ಎಂದು ರಾತ್ರಿ ಹೇಳಿದೆ. ಈಗ ನೋಡಿದ್ರೆ ನಿನ್ನ ಮನೆಯಲ್ಲಿ ಅದೂ ಪೊಲೀಸ್ ಆಫೀಸರ್ ಮನೆಯಲ್ಲಿ ಪ್ರತ್ಯಕ್ಷವಾಗಿದ್ದಾಳೆ'' ಎಂದಿದ್ದ ಅಚ್ಚರಿ ತುಂಬಿಕೊಂಡು. ''ರಾತ್ರಿ ನಾನು ವಿಷಯವನ್ನು ಪೂರ್ಣವಾಗಿ ಹೇಳುವುದಕ್ಕೆ ಬಿಡಲಿಲ್ಲವಲ್ಲ. ಹೌದು, ಅವಳು ನಕ್ಸಲ್ ಸೇರಿದ್ದು ನಿಜ. ನಂತರ ನನ್ನ ಮಧ್ಯಸ್ಥಿಕೆಯಿಂದ ಸರೆಂಡರ್ ಆಗಿದ್ದೂ ನಿಜ. ನನ್ನ ಹೆಂಡತಿಯಾಗಿ ಎರಡು ಮಕ್ಕಳ ತಾಯಿಯಾಗಿರುವುದೂ ನಿಜ...'' ಎಂದು ತಿಂಡಿ ಮುಗಿಸುವಷ್ಟರಲ್ಲಿ ಎಲ್ಲಾ ವಿಷಯಗಳನ್ನು ನಾನು ಮತ್ತು ಸುಮತಿ ಡಿಕ್ಯಾಸ್ಟ್ರೊನ ಮುಂದೆ ಹರಡಿದ್ದೆವು. ''ನಾನು ಇಲ್ಲಿಗೆ ಬಂದಿದ್ದು ಸಾರ್ಥಕ ಆಯ್ತು. ಬದುಕು ನಿಜಕ್ಕೂ ವಿಚಿತ್ರ ತಿರುವುಗಳ ಒಂದು ಸುದೀರ್ಘವಾದ ರಸ್ತೆಯೇ ಸರಿ. ನನಗೂ ಮದುವೆಯಾಗಿ ಎರಡು ಟ್ವಿನ್ಸ್ ಇವೆ. ನನಗೂ ಲೇಟ್ ಇಶ್ಯೂಸೇ. ಹೆಂಡತಿ ರಾಯಲ್ ಫ್ಯಾಮಿಲಿಯವಳು. ಟೆನಿಸ್ ಆಟಗಾರ್ತಿ. ಯೂರೋಪಿನ ಎಲ್ಲಾ ರಾಷ್ಟ್ರಗಳಲ್ಲೂ ಟೆನಿಸ್ ಟೂರ್ನಮೆಂಟ್ಸ್ ಕಂಡಕ್ಟ್ ಮಾಡ್ತಾ ಇರ್ತಾಳೆ. ಆ ನೆಪದಲ್ಲಿ ಸದಾ ದೇಶಗಳನ್ನು ಸುತ್ತುತ್ತಿರುತ್ತಾಳೆ. ನಾನು ಅವಳಿಗೆ ಸರಿಯಾದ ಮೇಟ್ ಅಲ್ಲವೇನೋ ಎಂಬ ಅನುಮಾನ ಒಮ್ಮೊಮ್ಮೆ ನನ್ನನ್ನೇ ಸುತ್ತಿಕೊಳ್ತದೆ. ನನಗೆ ಆ ಫ್ಯಾಮಿಲಿ ಹೆಣ್ಣು ಬೇಡ ಅನ್ನಿಸಿತ್ತು. ಆದರೆ, ನನ್ನ ತಾತ ಎಡ್ವರ್ಡ್ ಬಿಡಬೇಕಲ್ಲ. ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಕೈ ಜೋಡಿಸಿದವನು'' ಎಂದು ಖುಷಿ ಬೇಸರಗಳೊಂದಿಗೆ ಸಂಭ್ರಮಿಸಿದ್ದ. ಅವನ ಜೊತೆಯಲ್ಲಿ ನಾನೂ ಗೆಸ್ಟ್ ಹೌಸಿಗೆ ಹೋಗಿ ಅಲ್ಲಿಂದ ಎಸ್.ಐ ಜೊತೆಯಲ್ಲಿ ಇನ್ನೋವಾದಲ್ಲಿ ಅನ್ನವರಂಗೆ ಕಳಿಸುವ ಸಲುವಾಗಿ ಡಿಕ್ಯಾಸ್ಟ್ರೊನ ಜೊತೆ ನಾನೂ ಕಾರು ಹತ್ತಿದ್ದೆ. ಗೆಸ್ಟ್ ಹೌಸ್ ತಲುಪುವವರೆಗೂ ಡಿಕ್ಯಾಸ್ಟ್ರೊ ಏನೂ ಮಾತನಾಡದೆ ಧ್ಯಾನದಲ್ಲಿ ಮುಳುಗಿದವನಂತೆ ಕಣ್ಮುಚ್ಚಿ ಕುಳಿತಿದ್ದ. ಗೆಸ್ಟ್ ಹೌಸಿನಲ್ಲಿ ಲಗ್ಗೇಜ್ ಪ್ಯಾಕ್ ಮಾಡುತ್ತಾ, ''ತಾತ ಎಡ್ವರ್ಡ್ ಸತ್ತಾಗ ನನ್ನ ಅಮ್ಮ ಹೇಳಿದ ರಹಸ್ಯವೊಂದನ್ನು ನಿನ್ನ ಬಳಿ ಹೇಳಬೇಕೆನಿಸುತ್ತಿದೆ. ಅದು ಎಷ್ಟರಮಟ್ಟಿಗೆ ಸಾಧುವೋ ನನಗೆ ತಿಳಿದಿಲ್ಲ. ಗಂಗೆಯ ಮಣಿಕರ್ಣಿಕ ಘಾಟಿನ ವಿದ್ಯಮಾನಗಳು ಎದೆತುಂಬಿಕೊಂಡ ನಂತರ ನಾನು ತುಂಬಾ ನಿರಾಳನಾಗಿದ್ದೇನೆ ಅನ್ನಿಸುತ್ತಿದೆ. ಸತ್ಯ ಮಿಥ್ಯಗಳ ನಡುವೆ ಒಂದೇ ಒಂದು ಸಣ್ಣ ಗೆರೆ ಇದೆಯೆನಿಸುತ್ತಿದೆ. ಮತ್ತು ಒಮ್ಮೊಮ್ಮೆ ಅದೂ ಇಲ್ಲವಾದಂತೆ ಭಾಸವಾಗುತ್ತದೆ'' ಎಂದು ಲಗ್ಗೇಜ್ ಪ್ಯಾಕಿಂಗ್ ಮುಗಿದ ನಂತರ ಸಿಗರೇಟೊಂದನ್ನು ತೆಗೆದು ಬಾಯಿಗಿಟ್ಟುಕೊಂಡು, ನನ್ನ ಕಡೆಗೂ ಒಂದು ಸಿಗರೇಟು ಚಾಚಿದ್ದ. ನಾನು ಮಾತನಾಡದೆ ಸಿಗರೇಟು ಇಸಿದುಕೊಂಡು ಬಾಯಿಗಿಟ್ಟುಕೊಂಡಿದ್ದೆ. ''ಅನ್ನವರಂನಿಂದ ನಾನು ನಾಳೆ ಮಧ್ಯಾಹ್ನ ವಾಪಸ್ಸಾಗ್ತೀನಿ. ಸಂಜೆ ಆರು ಗಂಟೆಗೆ ಮುಂಬಯಿಗೆ ಫ್ಲೈಟ್'' ಎನ್ನುತ್ತಾ ಲೈಟರ್‌ನಿಂದ ಸಿಗರೇಟು ಹಚ್ಚಿಕೊಂಡು ನನ್ನ ಸಿಗರೇಟಿಗೂ ಬೆಂಕಿ ಹಚ್ಚಿದ್ದ. ''ಇಲ್ಲಿಂದ ಅನ್ನವರಂಗೆ ಕೇವಲ ಒಂದೂವರೆ ಗಂಟೆ ಪ್ರಯಾಣ. ನೀನು ಹೋಗಿ ಆರಾಮಾಗಿ ಸತ್ಯನಾರಾಯಣನ ದರ್ಶನ ಮಾಡಿಕೊಂಡು ಸಂಜೆ ಆರುಗಂಟೆಯೊಳಗೆ ಮತ್ತೆ ಇಲ್ಲಿಗೆ ಬರಬಹುದು'' ಎಂದಿದ್ದೆ. ''ಇಲ್ಲ, ನಾನು ದೇವಸ್ಥಾನದ ಗೆಸ್ಟ್ ಹೌಸಿನಲ್ಲೇ ಇಂದು ರಾತ್ರಿ ಕಳಿಬೇಕು. ಅದಕ್ಕೆಲ್ಲಾ ಅರೆಂಜ್ಮೆಂಟ್ಸ್ ಆಗಿದೆ. ನನಗೆ ಜಸ್ಟ್ ಅಲ್ಲಿಗೆ ಡ್ರಾಪ್ ಮಾಡಿದರೆ ಆಯ್ತು'' ಎಂದು ಎದ್ದು ನಿಂತು ಸಿಗರೇಟಿನ ಕೊನೆಯ ಗುಕ್ಕಿನ ಹೊಗೆಯನ್ನು ಹೊರಕ್ಕೆ ಬಿಟ್ಟು, ''ನನ್ನ ತಾತ ಎಡ್ವರ್ಡ್ ಸತ್ತ ವಾರದ ಮೇಲೆ ಅಮ್ಮ ನನ್ನ ಹತ್ತಿರ ಬಂದು ಒಂದು ಸಣ್ಣ ರಹಸ್ಯ ಹೇಳಿದ್ದಳು: ''ಡಿಕ್ಯಾಸ್ಟ್ರೊ, ನೀನು ನಿಮ್ಮ ತಾತ ಎಡ್ವರ್ಡ್‌ಗೆ ಹುಟ್ಟಿದವನು. ನಿಮ್ಮಪ್ಪ ರಾಬರ್ಟ್ ಇಂಪೊಟೆಂಟ್. ಮದುವೆಯಾಗಿ ಹತ್ತು ವರ್ಷಗಳಾದರೂ ಮಕ್ಕಳಾಗದಿದ್ದಾಗ ಖುದ್ದು ನಮ್ಮಿಬ್ಬರಿಗೂ ವೈದ್ಯಕೀಯ ಪರೀಕ್ಷೆ ಮಾಡಿಸಿದ್ದ ನಿಮ್ಮ ತಾತ ಎಡ್ವರ್ಡ್ ಅದೂ ಲಂಡನ್ನಿನಲ್ಲಿ ಬಹಳ